ಶ್ರೀ ರಾಮಕೃಷ್ಣ ಹೆಗಡೆ.—ಪೂರಾ ವರದಿ ಬಂದಮೇಲೆಯೇ ನಾವು ಕ್ರಮ ತೆಗೆದುಕೊಳ್ಳುವುದು ಪೋಲೀಸರ ಒಂದು ಗ್ರಾಜ್ಯನ್ಮದಿಂದ ಇದು ಆಗಿಲ್ಲವೆಂದು ನಮ್ಮ ಮನಸ್ಸಿಗೆ ಖಾತರಿಯಾದರೆ ಮಾತ್ರ ಈಗ ತೆಗೆದುಕೊಂಡಿರುವಂತಹ ಕ್ರಮವನ್ನು ರದ್ದುಮಾಡುತ್ತೇವೆ ಈಗ ಬಂದಿರುವ ವರದಿ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ನೆನ್ನೆ ಕೂಡ ಹೇಳಿದ್ದೇನೆ. ಈ ವಿಚಾರದಲ್ಲಿ ತನಿಖೆ ಮುಂದುವರೆಯುತ್ತದೆ. ಅದು ನಿಲ್ಲುವುದಿಲ್ಲ.

(vii) ರೈತ ಸಂಘದವರ ಬೇಡಿಕೆ ಬಗ್ಗೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೈತ ಸಂಘದವರು ಸರ್ಕಾರದ ಮುಂದೆ ಕೆಲವು ಬೇಡಿಕೆಗಳನ್ನಿಟ್ಟು ಕಳೆದ ತಿಂಗಳು ರಸ್ತೆ ಮತ್ತು ರೈಲು ಚಳುವಳಿ ಮಾಡಿದರು. ಅವರ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸದ ಕಾರಣ ಅವರು ಈ ರಾಜ್ಯದಲ್ಲಿ ಒಂದು ಅಶಾಂತಿಯ ವಾತಾವರಣವನ್ನು ಉಂಟು ಮಾಡಿರತಕ್ಕಂಥ ವಿಷಯ ತಮಗೆಲ್ಲರಿಗೂ ಗೊತ್ತಿದೆ. ಈ ರೈತ ಸಂಘದವರು ತಮ್ಮ ಚಳುವಳಿ ರೂಪವನ್ನು ಈಗ ಬೇರೆ ರೀತಿಯಲ್ಲಿ ಮಾರ್ಪಾಡು ಮಾಡಿದ್ದಾರೆ. ಈ ತಿಂಗಳ ೧೪ ರೊಳಗಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮಂತ್ರಿಗಳು ಮತ್ತು ಶಾಸಕರನ್ನು ಘೇರಾವ್ ಮಾಡುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಅವರ ಬೇಡಿಕೆಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಮುಖ್ಯ ಮಂತ್ರಿಗಳನ್ನು ಕೇಳಿದ್ದೇವೆ. ಆದರೆ ಅವರು ಯಾವ ಒಂದು ಹೇಳಿಕೆಯನ್ನೂ ಸಹ ಈ ಬಗ್ಗೆ ಕೊಟ್ಟಿಲ್ಲ ಅವರ ಬೆದರಿಕೆ ಕಾರಣದಿಂದ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ತಮ್ಮ ಪ್ರವಾಸ ಕಾರ್ಯಕ್ರಮವನ್ನು ರದ್ದು ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ —ಆ ಕಾರಣಕ್ಕಾಗಿ ರದ್ದು ಮಾಡಿಲ್ಲ.

ಶ್ರೀ ಜಿ. ಮಾದೇಗೌಡ.—ಅವರ ಸಮಸ್ಯೆಗಳನ್ನು ಬಗೆಹರಿಸಲು ತಾವು ಮನಸ್ಸು ಮಾಡಬೇಕು. ಏಕೆಂದರೆ, ಅವರು ಹೊರಡಿಸಿರುವಂತಹ ನೋಟೀಸ್‌ನಲ್ಲಿ ತಮ್ಮ ಒಂದು ಬೆಂಬಲ ಮತ್ತು ತಮ್ಮ ಒಂದು ಶಕ್ತಿಯಿಂದ ನೀವು ಅಧಿಕಾರಕ್ಕೆ ಬಂದಿದ್ದೀರಾ ಎಂದು ಹೇಳಿದ್ದಾರೆ. ಕಳೆದ ೩೫ ವರ್ಷಗಳ ಕಾಲ ರಾಜ್ಯವನ್ನಾಳಿದ ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆಗಳನ್ನು ಈಡೇರಿಸದ ಕಾರಣದಿಂದ ರೈತರು ರೊಚ್ಚಿದ್ದು ನಿಮಗೆ ಚುನಾವಣೆಯಲ್ಲಿ ಮತ ಕೊಟ್ಟ ಕಾರಣದಿಂದ ನೀವು ಅಧಿಕಾರಕ್ಕೆ ಬಂದಿದ್ದೀರಿ ಎಂದು ಅವರು ಪದೇ ಪದೇ ಹೇಳಿದ್ದಾರೆ. ಇಷ್ಟಾದರೂ ನೀವು ಅದರ ಬೇಡಿಕೆಗಳನ್ನು ಈಡೇರಿಸದ ಕಾರಣ ಅವರು ಬಹಳ ಆಕ್ರೋಶದಲ್ಲಿದ್ದಾರೆ. ಶ್ರೀ ರಾಮಕೃಷ್ಣ ಹೆಗಡೆಯವರನ್ನೇ ಹಿಡಿದು ಮರಕ್ಕೆ ಕಟ್ಟಿಹಾಕಬೇಕೆಂಬ ಮಾತನ್ನು ಅವರು ಹೇಳಿದ್ದಾರೆ. ಮಂತ್ರಿಗಳು ಯಾರೂ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಡುವುದಿಲ್ಲವೆಂಬ ಮಾತನ್ನು ರೈತರು ಹೇಳಿದ್ದಾರೆ. ಅಷ್ಟೇ ಅಲ್ಲ, ಮಂತ್ರಿಗಳು ಯಾರಾದರೂ ಸಿಕ್ಕಿದರೆ ಬೆತ್ತಲೆಯಾಗಿ ಬೀದಿಯಲ್ಲಿ ನಿಲ್ಲಿಸಬೇಕು ಮತ್ತು ಶಾಸಕರು ಯಾರಾದರೂ ಸಿಕ್ಕಿದರೆ ಕತ್ತೆ ಮೇಲೆ ಕೂರಿಸಿ ಮೆರವಣಿಗೆ ಮಾಡಬೇಕು ಎಂದು ಹೇಳಂತಿದ್ದಾರೆ. ಒಟ್ಟಿನಲ್ಲಿ ಯಾರಾದರೂ ಸಿಕ್ಕಿದರೆ ಸಾಕು, ಏನಾದರೂ ಮಾಡಿಬಿಡಬೇಕು ಎಂಬುದರಲ್ಲಿದ್ದಾರೆ ಈಗ ಅಧಿವೇಶನ ನಡೆಯುತ್ತಿರುವ ಕಾರಣದಿಂದ ನಾವೆಲ್ಲರೂ ನಿಮ್ಮ ರಕ್ಷಣೆಯಲ್ಲಿದ್ದೇವೆ. ಆದರೆ ಬೆಂಗಳೂರಿನ ಸುತ್ತಮುತ್ತ ಇರುವಂತಹ ಶಾಸಕರು ಪ್ರತಿವಾರ ಮನೆಯ ಅಗತ್ಯಬಿದ್ದರೆ ದಿನವೂ ಸಹ ತಮ್ಮ ತಮ್ಮ ಊರಿಗೆ ಹೋಗಿ ಬರಬೇಕಾಗುತ್ತದೆ. ಆದ್ದರಿಂದ ಅಂತಹ ಸಮಯದಲ್ಲಿ ಸರ್ಕಾರದವರು ನಮಗೆ ಯಾವ ರೀತಿ ರಕ್ಷಣೆ ಒದಗಿಸುತ್ತಾರೆಂಬುದನ್ನು ತಿಳಿಸಬೇಕು. ಮುಖ್ಯವಾಗಿ ಈ ಸರ್ಕಾರ ರಚನೆಯಾಗಲು ಸಹಾಯ ಮಾಡಿದಂಥ ರೈತರ ಬೇಡಿಕೆಗಳನ್ನು ಈಡೇರಿಸುವ ವಿಚಾರದಲ್ಲಿ ಮುಖ್ಯಮಂತ್ರಿಗಳು ಮೌನವಾಗಿರುವುದಕ್ಕೆ ಸಾಧ್ಯವಿಲ್ಲ ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನೆಂಬುದನ್ನು ಹೇಳಬೇಕು. ರೈತರ ಸಮಸ್ಯೆಗಳನ್ನು ಬಗೆಹರಿಸುವ ವಿಚಾರದಲ್ಲಿ ಸರ್ಕಾರದ ನಿಲುವೇನೆಂಬುದನ್ನು ನಾನು ತಮ್ಮ ಮುಖಾಂತರ ತಿಳಿಯಲು ಇಚ್ಛಪಡುತ್ತಿದ್ದೇನೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನೂ ಸಹ ಈ ವಿಚಾರವನ್ನು ಕಳೆದವಾರ ಸರ್ಕಾರದ ಗಮನಕ್ಕೆ ತಂದಾಗ ಸೋಮವಾರ ಇಲ್ಲವೇ ಮಂಗಳವಾರ ಉತ್ತರ ಕೊಡುವುದಾಗಿ ಹೇಳಿದ್ದರು. ಆದ್ದರಿಂದ ಈ ದಿನವಾದರೂ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಎಚ್. ಗಂಗಾಧರನ್,—ಮಾನ್ಯ ಅಧ್ಯಕ್ಷರೇ, ರೈತ ಮಂಖಿಂಡರು ೭ ಪರತ್ತುಗಳನ್ನು ಹಾಕಿ ವಿನಂ ಕರಪತ್ರಗಳನ್ನು ಹೊರಡಿಸಿದ್ದಾರೆ, ಈ ಬಗ್ಗೆ ಇಲ್ಲಿ ಚರ್ಚೆಯಾಗಬೇಕೆಂದು ನಾವುಗಳು ಸಹ ನಿಯಮ ೬೯ರ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಬಗ್ಗೆ ನಾನು ಮತ್ತು ಶ್ರೀ ಪಂಪಾಪತಿಯವರು ಸಹ ತಮಂಗೆ ನೋಟೀಸ್ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಎಲ್ಲ ಸದಸ್ಯರೂ ನೋಟೀಸ್ ಕೊಟ್ಟಿರುವುದರಿಂದ ಈ ಬಗ್ಗೆ ಸರ್ಕಾರದವರು ಒಂದು ಹೇಳಿಕೆ ಕೊಡುವುದು ಒಳ್ಳೆಯದು.

(viii) ಮಾನ್ಯ ಎಂಬುವರ ಪೋಸ್ಟ್ ಮಾರ್ಟಂ ವರದಿ ಬಗ್ಗೆ. (ಮುಂದ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇದಕ್ಕೂ ಪೂರ್ವದಲ್ಲಿ ನನಗೆ ಬಂದಿರುವಂತಹ ಪೋಸ್ಟ್-ಮಾರ್ಟಮ್ ರಿಪೋರ್ಟ್‌ನಲ್ಲಿ ಏನಿದೆ ಎಂಬುದನ್ನು ಹೇಳುತ್ತೇನೆ.

"External injuries :

1) Impact abrasion on the left fore head and frontal region 2"x2" —dry thin scab present.

2) Impact abrasion on the right side of frontal region and forehead 2"x2" --dry thin scab present

3) Impact abrasion at the outer angle of the right eye and right cheek 2"x2" —dry thin scab present.

4) Impact abrasion on the left side of the neck 2"x2" —dry thin scab present.

5) Contused abrasion on the left shoulder on the front and outwardly 4"x4" — contusion is reddish in colour with bluish discolouration at the periphery.

Skull and vertebrae, intact ; membranes, intact; brain and spinal cord, Brain-intact, congested. Walls ribs and cartiages, intact, pleurac, intact, mucus membrane congested. right and left lung, intact, congested, pericardium, intact, Walls, scribed, peritoneum, intact. mouth, pharyns and aesophagun. intact-stomach and its contents, 4 ounces of brown coloured fluid small-NAD, mucus membrane-congested, small and Large Intestine and their contents. gas and contents, Liver Intact, congested, Kidneys, intact, congested."

"Heart : Weight 550 gms. The Heart is enlarged. Left ventricular wall is thickened and is 22mm in thick. It is fatty heart. Altheromatous plaques present in the ascending aorta. The opening of both the coronary arteries are narrowed. Left coronary artery lumen is almost completely blocked by atheromatus plaques about 16m abdomen from its origin and right coronary artery lumen is almost narrowed. And then, heart sent for Histopathology examination."